ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 3, July-August 2025, Pp. 233-239
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಕಾವ್ಯದಲ್ಲಿ ನಾಡು, ನುಡಿ, ಸಂಸ್ಕೃತಿ ಮತ್ತು ದೇಶಾಭಿಮಾನ

**ಡಾ. ರೆಹಮಾನ ಆಯ್. ಗೊರಜನಾಳ**
ಸಹಾಯಕ ಪ್ರಾಧ್ಯಾಪಕರು, ಕೆ.ಎಲ್.ಇ. ಸಂಸ್ಥೆಯ ಶ್ರೀ ಮೃತ್ಯುಂಜಯ, ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

**Abstract:**
*ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಾಚೀನ ಕಾಲದಿಂದಲೂ ಹಿಡಿದು ಆಧುನಿಕ ಕಾಲದವರೆಗೂ ಕಾವ್ಯ ಮೀಮಾಂಸೆಯ ಪರಿಕಲ್ಪನೆಯ ಪ್ರಯೋಜನವನ್ನು ತಿಳಿಯಬಹುದಾಗಿದೆ. ಕವಿ, ಕಾವ್ಯ, ಸಹೃದಯ ಲೋಕ ಕಲ್ಯಾಣದ ಪರಿವರ್ತನೆಯ ವಿಚಾರಧಾರೆಗಳು ಇರುವುದನ್ನು ತಿಳಿಯಬಹುದಾಗಿದೆ. ಕರ್ನಾಟಕದ ಭೌಗೋಳಿಕ, ಇತಿಹಾಸ, ಪರಂಪರೆ, ಭಾಷೆಯ ಅಭಿಮಾನ, ಸಂಸ್ಕೃತಿ, ಅರಸರು, ಅರಸುಮನೆತನ ನೀಡಿದ ಸಾಂಸ್ಕೃತಿಕ ಕೊಡುಗೆಯನ್ನು ಕಾಣಬಹುದಾಗಿದೆ. ಅದರಂತೆ ದೇಶದ ಹೆಮ್ಮೆ, ಅಭಿಮಾನವನ್ನು ಕಾವ್ಯದಲ್ಲಿ ಉಲ್ಲೇಖಗೊಂಡಿರುವುದನ್ನು ಅರಿಯಬಹುದಾಗಿದೆ.*

**Keywords:** *ಕನ್ನಡ ಸಾಹಿತ್ಯ, ಕನ್ನಡ ಕಾವ್ಯ, ಸಂಸ್ಕೃತಿ, ದೇಶಾಭಿಮಾನ*

## ಪೀಠಿಕೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಾಚೀನ ಕಾಲದಿಂದ ಹಿಡಿದು ಆಧುನಿಕ ಕಾಲದವರೆಗೂ ಕಾವ್ಯ ಮೀಮಾಂಸೆಯ ಪರಿಕಲ್ಪನೆಯ ಪ್ರಯೋಜನವನ್ನು ತಿಳಿಯಬಹುದಾಗಿದೆ. ಕವಿರಾಜಮಾರ್ಗ ಚಂಪೂಕಾವ್ಯ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಸಾಹಿತ್ಯದಿಂದ ಇದು ನಡೆದು ಬಂದ ಬಗೆಯನ್ನು ತಿಳಿಯಬಹುದಾಗಿದೆ. ಹೀಗೆ ಕವಿಯ ಕಲ್ಪನೆಯೂ ಹೊಸತನದ ಚಿಲುಮೆಯಾಗಿ ರೂಪ ಪಡೆಯುತ್ತದೆ. "ಇದು ಬಹು ಶಕ್ತವಾದ ಬರಹ, ಕಾವ್ಯ ಬರೆಯುವುದು, ಕಾವ್ಯ ಓದುವುದು ಕ್ರಿಯೆಯಾಗುವ ರಚನೆ, ವೈಚಾರಿಕತೆಯನ್ನು, ಸೂಕ್ಷ್ಮತೆಯನ್ನು ಎಷ್ಟರಮಟ್ಟಿಗೆ ಅರಗಿಸಿಕೊಳ್ಳುತ್ತದೆ. ಎನ್ನುವುದನ್ನೂ ಕಾದು ನೋಡಬೇಕು".[1] ಈ ರೀತಿಯಾಗಿ ಕವಿಯ ರಚನೆಯ ವಿವಿಧ ನೆಲೆಗಳನ್ನು ಕಾವ್ಯದಮುಖಾಂತರ ಅರ್ಥೈಯಿಸಿಕೊಳ್ಳಬಹುದಾಗಿದೆ.

## ಕನ್ನಡ ಕಾವ್ಯದಲ್ಲಿ ನಾಡು, ನುಡಿ ಸಂಸ್ಕೃತಿ ವಿಚಾರಗಳು

### *ಕನ್ನಡಮ್ಮ-ಅಮೃತಗೌಡ ಶಾಡಲಗೇರಿ*

ಕರುನಾಡಿನ ತಾಯಿ ಚಾಮುಂಡೇಶ್ವರಿಯು ಕನ್ನಡ ತಾಯಮ್ಮನಾಗಿರುವಳು, ಚಂದ, ಅಂದ ನಮ್ಮಮ್ಮ ತಾಯಮ್ಮ ದುಷ್ಟರ ಸಂಹಾರ ಮಾಡಿ ಶುಭದ ಜಯವನ್ನು ಮೊಗದಲ್ಲಿ ಮೂಡಿರುವುದು. ಇವಳು ದುರ್ಗೆ ಸರಸ್ವತಿ, ಸಿರಿದೇವಿಯೇ ಆಗಿರುವಳು.

[1] ಶೇಷಗಿರಿರಾವ್, ಎಲ್.ಎಸ್. *ಹೊಸಗನ್ನಡ ಸಾಹಿತ್ಯ ಚರಿತ್ರೆ,* ಪು.ಸಂ. 264

***Please cite this article as:*** ರೆಹಮಾನ ಆಯ್. ಗೊರಜನಾಳ. (2025). ಕನ್ನಡ ಕಾವ್ಯದಲ್ಲಿ ನಾಡು, ನುಡಿ, ಸಂಸ್ಕೃತಿ ಮತ್ತು ದೇಶಾಭಿಮಾನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(3), 233–239

ಕರುನಾಡನ್ನು ಶಾಂತಿಯ ನೆಲೆಬೀಡಾಗಿ ರೂಪಿಸಿರುವಳು. ಕನ್ನಡಿಗರು ಪೂಜಿಸುವರು. ಆರಾಧಿಸುವವರು. ಕರ್ನಾಟಕದ ಸಂಸ್ಕೃತಿಗೆ ಮುಖ್ಯ ಅಂಶಗಳು ಇರುವುದು ಪರಿಚಯವಾಗುತ್ತದೆ. "ಕರುಣಾ ನಿಧಿಯು ಈ ದಾತೆ ನಮ್ಮಮ್ಮನೆ, ಸುಖ್ಯಾತೆ ಇವಳು. ಪ್ರಖ್ಯಾತ ಇವಳು ಪೂಜ್ಯಳು ಇವಳು ಸರ್ವರ ಪಾಲಿಗೆ, ನಮ್ಮಮ್ಮ ನಮ್ಮಮ್ಮ, ನಮ್ಮಮ್ಮ, ಜೇನ ಸಿಹಿಯ, ರುಚಿ ನೋಡು ಕನ್ನಡದಲ್ಲಿ, ಕನ್ನಡದ ಹಸಿರು, ನಮಗೆಲ್ಲ ಉಸಿರು, ಚೇತನವಳಿವಳು. ಕನ್ನಡ ಕುಲಜಗೆ, ನಮ್ಮಮ್ಮ ನಮ್ಮಮ್ಮ ನಮ್ಮಮ್ಮ".[2] ಕರುನಾಡು, ನುಡಿ, ಕನ್ನಡಾಂಬೆಯ ಮಹಿಮೆಯನ್ನು ಈ ಅಧ್ಯಯನದಿಂದ ತಿಳಿಯಬಹುದಾಗಿದೆ.

**ನಿತ್ಯೋತ್ಸವ – ಕೆ.ಎಸ್. ನಿಸಾರ್ ಅಹಮದ್**

ಕರ್ನಾಟಕದ ಪಶ್ಚಿಮ ತೀರದ ಘಟ್ಟದಿಂದ ಸಂಪನ್ಮೂಲವು ಸಂವೃದ್ಧಿಯಾಗಿದೆ. ಜೋಗ ಜಲಪಾತವು ಶರಾವತಿ ನದಿಯ ಹರಿವು ಬೆಳಕನ್ನು ಮೂಡಿಸಿದ ಪ್ರಭಾವವಿದೆ. ಅದೇ ತುಂಗಾ ನದಿಯು ಜೀವಜಲವಾಗಿದೆ. ಸಹ್ಯಾದ್ರಿಯ ಬೆಟ್ಟದಲ್ಲಿ ಖನಿಜ ಸಂಪನ್ಮೂಲ ಲೋಹ, ಹಸಿರಾದ ವನಗಳು ತೇಗ, ಶ್ರೀಗಂಧವು ತಾಯಿ ಭುವನೇಶ್ವರಿಯ ಸಿರಿಸಂಪತ್ತನ್ನು ವಿವರಿಸುತ್ತದೆ. ಕನ್ನಡ ನಾಡಿನ ಭಾಷೆಯನ್ನು ಮಾತನಾಡುವಾಗ ಪ್ರಾದೇಶಿಕತೆಯ ನೆಲೆಯನ್ನು ಕಾಣಬಹುದಾಗಿದೆ. ಭಾರತದ, ಕರ್ನಾಟಕದ ಇತಿಹಾಸವು ಹಿಮಾಲಯದ ಪರ್ವತದಿಂದ, ಭೌಗೋಳಿಕ ಲಕ್ಷಣದೊಂದಿಗೆ ಸಿಂಹಾಸನ ಮಾಲೆಯನ್ನು ಅಲಂಕರಿಸಿದಂತಾಗಿದೆ. ಗತಿಸಿಹೋದ ಸಾಹಸದ ವಿಷಯಗಳು ಇತಿಹಾಸವು ಸಾರುತ್ತದೆ. ಇದಕ್ಕೆ ಸಾಕ್ಷಿಯಾಗಿ ಶಾಸನಗಳು, ಓಲೆಗರಿಗಳು, ದೇಗುಲ, ಸಾಕ್ಷಿಯಾಗಿವೆ. ಸದಾ ವಿಕಾಸವನ್ನು, ಶಾಂತಿಯನ್ನು ಹೊಂದುವ ನೆಲೆಯನ್ನು ಮಹಿಮೆ ಕುರಿತು ಕವಿಯ ಕಲ್ಪನೆಯ ತಾಯಿ ನಿತ್ಯೋತ್ಸವವು ನಿನಗೆ ಎಂದು ವಿವರಿಸುತ್ತದೆ. "ಜೋಗದ ಸಿರಿ ಬೆಳಕಿನಲ್ಲಿ, ತುಂಗೆಯ ತೆನೆ ಬಳುಕಿನಲ್ಲಿ, ಸಹ್ಯಾದ್ರಿಯ ಲೋಹದಿಂದ ಉತ್ತುಂಗದ ನಿಲುಕಿನಲ್ಲಿ. ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳಲ್ಲಿ ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ. ಹಲವೆನ್ನದ ಹಿರಿಮೆಯೆ, ಕುಲವೆನ್ನದ ಗರಿಮೆಯೆ ಸದ್ವಿಕಾಸಶೀಲ ನುಡಿಯ ಲೋಕಾಮೃತ ಸೀಮೆಯೆ. ಈ ವತ್ಸರ ನಿರ್ಮತ್ಸರ ಮನಸುದಾರ ಮಹಿಮೆಯೆ, ನೀತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ."[3] ಕನ್ನಡ ನಾಡು, ನುಡಿ, ಸಂಸ್ಕೃತಿ, ಇತಿಹಾಸದ ವಿಷಯಗಳನ್ನು ಕೆ.ಎಸ್.ನಿಸಾರ್ ಅಹಮದ್ ಅವರು ತಿಳಿಸುತ್ತಾರೆ.

"ಭಾವಗೀತೆಯ ಪ್ರಕಾರ ಕನ್ನಡದಲ್ಲಿ ಮೊದಲು ಇರಲಿಲ್ಲವೆಂದಲ್ಲ. ಖಂಡ ಕಾವ್ಯಗಳು, ದಾಸರ ಗೀತೆಗಳು, ಸರ್ವಜ್ಞನ ತ್ರಿಪದಿಗಳು, ವಚನಗಳು ಇವೆಲ್ಲ ಭಾವಗೀತಕ್ಕೆ ತೀರ ಸಮೀಪವಾದ ಪ್ರಕಾರಗಳಾಗವೆ. ಕೇವಲ ಸಹಜವಾದ ಭಾವ ಸಂಪತ್ತಿನಿಂದಲೇ ತುಂಬಿಕೊಂಡ ಜಾನಪದ ಕಾವ್ಯದ ಬೆಳೆಯೂ ಸಮೃದ್ಧವಾಗಿತ್ತು. ಆದರೆ ಮಹಾಕಾವ್ಯದಂತೆ ಇಲ್ಲಿಯೂ ವಸ್ತುನಿಷ್ಠತೆಯೇ ಪ್ರಧಾನವಾಗಿದೆ. ಅಲ್ಲದೆ ಈ ಮಾದರಿಯ ಕಾವ್ಯ ಆಧುನಿಕ ಕಾಲದಲ್ಲಿಯೇ ಹೆಚ್ಚು ಲೋಕಪ್ರಿಯತೆಯನ್ನು ಪಡೆಯಿತು"[4]. ಹೀಗೆ ಕಾವ್ಯದ ಮಹತ್ವ, ಪ್ರಯೋಜನ. ಜನಪ್ರಿಯತೆಯನ್ನು ಅಧ್ಯಯನದ ಮುಖಾಂತರವಾಗಿ ತಿಳಿದು ಬರುತ್ತದೆ.

**ಕನ್ನಡ ಕಣ್ಮಣಿ–ಅಶ್ವಿನಿ ಡಿ.ಎನ್**

ಕವಿಯಿತ್ರಿ ಅಶ್ವಿನಿ ಡಿ.ಎನ್. ಅವರು ನೂರು ಜನ್ಮ ಪಡೆದು ಬರಲಿ ಕರ್ನಾಟಕದಲ್ಲಿಯೇ ಹುಟ್ಟುವೆನು ಎಂಬ ಮನಸ್ಸಿನ ಹಂಬಲವನ್ನು ಅಭಿವ್ಯಕ್ತಪಡಿಸಿದ್ದಾರೆ. ತಾವು ಕನ್ನಡದ ಕಣ್ಮಣಿಯಾಗಿ ಬದುಕಲು ಪ್ರಯತ್ನಿಸುವೆ ಎಂದು ತಮ್ಮ ಅಭಿಲಾಷೆಯನ್ನು ತಿಳಿಸುವರು. ಕರುನಾಡಿನ ನೆಲ, ಜಲ, ಭಾಷೆ,

[2] ಅಮೃತಗೌಡ ಶಾಡಲಗೇರಿ, ಪರಿಭ್ರಮಣೆ, ಪು.ಸಂ. 37

[3] ಭಜಂತ್ರಿ, ವೈ.ಎಂ., ವೆಂಕಟೇಶ್, ಎಚ್. (ಸಂ.). ಕನ್ನಡ ಭಾಷಾ ಪಠ್ಯ–ಮಲಪ್ರಭಾ–1, ಪು.ಸಂ.07

[4] ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪು.ಸಂ. 3839

ತಂದೆ–ತಾಯಿ ಪ್ರೀತಿ, ಭುವನೇಶ್ವರಿ ತಾಯಿಗೆ ತಮ್ಮಿಂದಾಗುವ ಸೇವೆಯನ್ನು ಮಾಡಲು ಬಯಸುತ್ತಾರೆ. ಬಾಳು ಇಲ್ಲಿ ಸೌಂದರ್ಯದ ಪ್ರತಿ ರೂಪವಾಗಿ ಎಲ್ಲ ಅನುಭವಗಳನ್ನು ಹಂಚಿಕೊಳ್ಳಲು ಇಚ್ಛಿಸಿದ್ದಾರೆ. "ಇಲ್ಲಿನ ನೆಲ, ಜಲ, ಭಾಷೆ, ಮನದಲ್ಲಿ ಅಚ್ಚು ಹೊತ್ತಿದೆ. ತಾಯಿ ಕಾವೇರಿಯ ಋಣವಿನ್ನೂ ತೀರಿಸಬೇಕಿದೆ. ಅಮ್ಮನ ತಾಳ್ಮೆ ಅಪ್ಪನ ಸಹನೆ ಕಲಿಯಬೇಕಿದೆ. ಕನ್ನಡ ತಾಯಿಗೆ ನಾ ಇನ್ನೂ ಸೇವೆ ಮಾಡಬೇಕಿದೆ. ಕಂಗು–ತೆಂಗು ಸಜ್ಜೆ ತೆನೆಯು ಮನವ ಸೆಳೆದಿದೆ. ಬಾಳೆಬಾಗಿ ಮಾವು ಹರಸಿ ನನ್ನ ಹರಸಿದೆ".[5] ಅಶ್ವಿನಿ ಡಿ.ಎನ್. ಅವರು ಕನ್ನಡ ಕಣ್ಮಣಿಯಾಗಿ ಇಲ್ಲಿಯೇ ಮತ್ತೆ ಜನಿಸಿ ಬೆಳೆದು ಬಾಳುವೆ ಎಂಬ ಹೃದಯದಂತರಾಳದ ಭಾವನೆಗಳನ್ನು ಅಭಿವ್ಯಕ್ತಪಡಿಸಿದ್ದಾರೆ.

***ಕನ್ನಡಿಗರಿಗೊಂದು ಕರೆ – ಎಮ್.ಕೆ.ಶೇಖ್–ಮೌಕುಶೇ***

ಧಾರವಾಡದಲ್ಲಿ ಸಾಧನಕೇರಿ ಕವಿಯು ಹೋಗುತ್ತಿರುವಾಗ ಎಲ್ಲರಿಗೂ ಬರುವಂತೆ ಆಹ್ವಾನ ನೀಡುವರು ಅಕ್ಷರಜಾತ್ರೆಗೆ ಕವಿಗಳು, ಸಣ್ಣವರು, ದೊಡ್ಡವರು ಎಂಬ ಬೇಧವಿಲ್ಲದೆ ಬನ್ನಿ ಎನ್ನುವರು. ರಾಜಕೀಯದ ಕೊಳಕು ಮನಸಿನವರೇ ಬರಬೇಡಿ ಎಂದು ಹೇಳುವರು ಸಾಧನಕೇರಿಯಲ್ಲಿ ಕಾವ್ಯ ಜ್ಞಾನ ಪಡೆಯಲು ಹೇಳುವರು. ಕನ್ನಡ, ನಾಡು, ನುಡಿ, ಸಂಸ್ಕೃತಿಯ ಚಿಂತನೆಗಳಿವೆ. ಕನ್ನಡದ ಅಭಿಮಾನಕ್ಕಾಗಿ ಬರಲು ಆಮಂತ್ರಿಸುವರು.

"ಹೊಂಟೀನಿ ನಾನು ಸಾಧನಕೇರಿಗೆ, ಬರ್ತಿರೆನ್ರಪ್ಪಾ ಅಲ್ಲೇ ಇರ್ತಿರೇನ್ರಪ್ಪಾ ಅಕ್ಷರಜಾತ್ರಿ ನಡೀತದ ಅಲ್ಲಿ, ಕವಿಗಳು ಕೂಡಿ ನಿಂತಾರಲ್ಲಿ, ಸಣ್ಣಂವ ದೊಡ್ಡಂವ ಅಂತೇನಿಲ್ಲ, ಅಲ್ಲಿ, ಜಾತಿ ಪಾತಿ ಬಿಟ್ಟು ಬನ್ರಿ, ಬರ್ತಿರೇನ್ರಪ್ಪಾ ಅಲ್ಲೇ ಇರ್ತಿರೇನಪ್ಪಾ, ಸಿರಿಗನ್ನಡಕ್ಕಾಗಿ ಬಾಳೋಣಂತ, ಸಿರಿಗನ್ನಡ ಜಗದಿಗೆಲ್ಲಿಸೋಣಂತ, ಕನ್ನಡ ಮನುಕುಲ ಸಾರೋಣಂತ, ನಾಡು ನುಡಿಗಾಗಿ ಹೋರಾಡೋಣಾಂತ, ಬರ್ತಿರೇನ್ರಪ್ಪಾ ಅಲ್ಲೇ ಇರ್ತಿರೇನ್ರಪ್ರಾ".[6] ಸಾಧನಕೇರಿಯಲ್ಲಿ ಅಕ್ಷರ ಜಾತ್ರೆಗೆ ಕವಿಯೂ ಎಲ್ಲರಿಗೂ ಕರೆಯುತ್ತಿದ್ದಾರೆ.

"ಕನ್ನಡ ಹಾಡು–ಕೇಶವಾ ನೀರಾ, ಹಾಡುವೆನು ನಾನು ಕನ್ನಡ ಹಾಡು. ಕನ್ನಡ ಕಾವೇರಿ ಕಲಕಲ ಹಾಡು. ಕನ್ನಡ ಕೋಗಿಲೆ ಕೂಹೂ ಕೂಹೂ ಹಾಡು. ಪಂಪ ಕುವೆಂಪು ರಚಿಸಿದ ಹಾಡು, ಕನಕ ಪುರಂದರರು ಹಾಡಿದ ಹಾಡು ಬಸವ ಸರ್ವಜ್ಞನ ವಚನದ ಹಾಡು. ಕನ್ನಡ ಜನರ ಜನಪದ ಹಾಡು. ಕನ್ನಡ ವನದ ಸಂಪಿನಹಾಡು. ಕನ್ನಡ ಹೂವಿನ ಕಂಪಿನ ಹಾಡು. ಕನ್ನಡ ಶಿಲೆ ಕಲೆಗಳ ಹಾಡು. ಕನ್ನಡ ಗಂಧದ ಚಿನ್ನದ ಹಾಡು. ಕನ್ನಡ ಮಕ್ಕಳ ಜೋಗುಳ ಹಾಡು. ಕನ್ನಡ ತಂಗಾಳಿ ಬೀಸುವ ಹಾಡು, ಹಾಡಲಾ ನಾನು ಕನ್ನಡ ಹಾಡು, ಹಾಡಲಾ ನಾನು ಹಾಡಲಾನಾನು".[7] ಕನ್ನಡ ತನದ ಇತಿಹಾಸವನ್ನು ಕವಿಯು ಪರಿಚಯಿಸುವರು.

***ನಾಡದೇವಿಗೆ ನಮಿಸುವಾ – ಶ್ರೀ ಶೈಲ ಬಿರಾದಾರ***

ನಾಡದೇವಿಗೆ ಅನ್ನ ನೀಡುವ ಕನ್ನಡಾಂಬೆಗೆ ಹೊನ್ನೆ ಬೆಳೆಯುವ ನಾಡಿಗೆ ಗೆಳೆಯನೆ ನಮಿಸೋಣ. ಕನ್ನಡ ಭಾಷೆ ಕಲಿಸುವ ಕನ್ನಡಾಂಬೆಗೆ ಮಕ್ಕಳು ನಾವೆಲ್ಲರೂ ಭುವನೇಶ್ವರಿಯ ಶ್ರೀಗಂಧದನಾಡು, ಈ ತಾಯಿಯ ಪ್ರೀತಿಗೆ ಪರಿಸರಕ್ಕೆ ಸೋತು ಹೋದೆವು. "ಬನ್ನಿ ಗೆಳೆಯರೆ ಹೊನ್ನೆ ಬೆಳೆಯುವ, ನಾಡ ದೇವಿಗೆ ನಮಿಸೋವಾ, ಅನ್ನ ಕೊಡುವ ಕನ್ನಡಾಂಬೆಗೆ ಕಣ್ಣಿ ಹಾಕಿದವರ ಬಗೆಯುವಾ. ಜಗದೊಳಂದವು ಈ ನಾಡ ಗಂಧವು, ಘಮಘಮಿಸುತಿರುವುದು ಶ್ರೀಗಂಧವು, ತಾಯಿ ಭುವನೇಶ್ವರಿ ಕೇಶಲಂಕಾರವು, ಈ ನಾಡಿನ ಕಾಡಿನ ಹೂ ಬಳ್ಳಿಯು. "ಸೋತು ಪರವಶರಾದೆವಿಂದಿಗೆ, ಈ ನಾಡ ದೇವಿಯ ಚೆಲುವಿಗೆ

---

[5] ಅಶ್ವಿನಿ ಡಿ.ಎನ್. ಮಾಸದ ಕಿರುನಗೆ, ಪು.ಸಂ. 62

[6] ಶೇಖ್ ಎಮ್.ಕೆ. (ಮೌಕುಶೇ). *ಭೂಮಾತೆ ನನ್ನ ಮಾತೆ.* ಪು.ಸಂ. 06–07

[7] ನೀಲಕಂಠೇಗೌಡ, ಹೊ.ನ. (ಸಂ.) *ಪದಗಳಿಗೆ ಗೆಜ್ಜೆ ಕಟ್ಟಿದಾಗ.* ಕನ್ನಡ ಸಂಘ, ಪು.ಸಂ.35

ಶರಣು ಬಂದೆವು ತಲೆಯ ಬಾಗಿ, ತಾಯೆ ನಿನ್ನಯ ಪ್ರೀತಿಗೆ".[8] ಹೀಗೆ ಕನ್ನಡಭಾಷೆ, ಪರಿಸರವನ್ನು ಕುರಿತು ಕವಿಯು ವಿವರಿಸುವರು.

***ಕರುನಾಡು – ಲಕ್ಷ್ಮೀ ಮಾ. ಹರಳೆ***

ಕನ್ನಡದ ಹಣತೆಯನ್ನು ಹಚ್ಚಿರಿ ಕೀರ್ತಿಯನ್ನು ಬೆಳಗಿಸಿರಿ. ಬೆಂಗಳೂರು ಕೆಂಪೇಗೌಡರ ಕೊಡುಗೆಯಾಗಿದೆ. ಕನ್ನಡಾಂಬೆಗೆ ಕೈಮುಗಿಯಿರಿ ಪರಿಸರದಿಂದ ಸಮೃದ್ಧಿಯಾಗಿದೆ. ಪರಂಪರೆ ಇತಿಹಾಸವು ಶ್ರೀಮಂತ ಸಂಸ್ಕೃತಿಯನ್ನು ಕರುನಾಡು ಹೊಂದಿದೆ.

"ಕನ್ನಡದ ಹಣತೆ ಹಚ್ಚಿರಿ, ಕಾವೇರಿಯನು ಮರೆಯದಿರಿ. ಕೀರ್ತಿ ಪತಾಕೆ ಹಾರಿಸಿರಿ, ಕೀಳರನ್ನ ಕಡೆಗಾಣಿಸದಿರಿ. ಕುಂತಿಮಾತೆಯ ಮರೆಯದಿರಿ, ಕೂಲಿಜನರನ್ನು ಗೌರವಿಸಿರಿ. ಕೆಂಪಯ್ಯನ ಬೆಂಗಳೂರನ್ನ ಬಣ್ಣಿಸಿರಿ. ಕೇಶವನ ದರುಶನ ಕಂಡ ಕನಕದಾಸರ ಪೂಜಿಸಿರಿ. ಕೈಎತ್ತಿ ಕನ್ನಡಾಂಬೆಗೆ ನಮಸ್ಕರಿಸಿರಿ. ಕೋಟಿ ಕನ್ನಡಿಗರ ಪುಣ್ಯವಿದು. ಕೋಟಿ ಕೋಟಿ ಚಪ್ಪಾಳೆಯ ಕಾವ್ಯವಿದು, ಕೌಸಲ್ಯರಾಮನ ಸೀಮೆಯಿದು, ಕಂಪನುಬೀರುವ ಕುಸುಮಗಳ ನಾಡಿದು. ಕಃ ಎನ್ನುವ ಹಾರಿದವು ಬಾನಿಗೆ ಬಾನಾಡಿಗಳು, ಕನ್ನಡ ಕನ್ನಡ ಎನ್ನುತ ಹಾಡಿತು ಕೋಗಿಲೆ. ಕನ್ನಡವೆನ್ನುತ ಕುಣಿಯಿತು ನವಿಲು".[9] ಹೀಗೆ ಕವಿಯ ಕಾವ್ಯ ಕಲ್ಪನೆಯಿಂದ ಕರುನಾಡು ಶ್ರೀಮಂತ ಸಂಸ್ಕೃತಿಯ, ಪರಿಸರ ನಾಡಿನ ಅಭಿಮಾನ ಕುರಿತು ಇತರೆ ವಿಷಯಗಳು ವಿವರಿಸಿದ್ದಾರೆ.

**ಕನ್ನಡ ಕಾವ್ಯದಲ್ಲಿ ದೇಶಾಭಿಮಾನದ ವಿಚಾರಗಳು**

***ರಾಷ್ಟ್ರೀಯ ಸೇವಾಭಾಗ್ಯ – ಅಮೃತಗೌಡ ಶಾಡಲಗೇರಿ***

ರಾಷ್ಟ್ರೀಯ ಸೇವೆಗೆಂದು ದಿನವಿಂದು ಎಲ್ಲೆಡೆಯೂ ಸಂತಸದ ಸಂಭ್ರಮದ ಆನಂದದ ಹರ್ಷದ ಹೊನಲಾಗಿ ಪರಿಣಮಿಸಿದೆ. ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ದೇಶದ ಸೇವೆಯನ್ನು ಮಾಡುವವರು ನಾವೇ ಧನ್ಯರು, ಪುಣ್ಯರು. ನಾವೆಲ್ಲರೂ ಭಾರತೀಯರು ಪ್ರೇಮದಿಂದ ಶಾಂತಿಯ ಪರಿಪಾಲಕರಾಗಿ ಏಕತೆಯ ಗುಣಗಾನವಿದೆ. ದೇವರ ಕೃಪೆಯ ಸೇವೆಯನ್ನು ಮಾಡಲು ಅವಕಾಶವನ್ನೂ ನೀಡಿರುವರು. ಈಡೀ ಜಗತ್ತೇ ಮೆಚ್ಚುಗೆಯನ್ನು ಪಡೆಯುವಂತೆ ಭಾರತೀಯ ಸಂಸ್ಕೃತಿಯ ಮನಸ್ಸನ್ನು ಆವರಿಸಿದೆ. "ರಾಷ್ಟ್ರೀಯ ಸೇವೆಯ ದಿನವಿಂದು. ಈ ದಿನವೆ ಹರುಷದ ಹೊನಲಿಂದು ಮಹಾಮಹಿಮ ಮಹಾತ್ಮಾ ಗಾಂಧಿಯೊಳು  ಮಹಾ ಶಕ್ತಿ ಸೆಲೆ ಮೂಡಿದುದು. ದೇಶ ಸೇವೆಯ ಗೈಯುತಲಿ, ತಾ ನಿತ್ಯ ಜನಕೆ ಶುಭಕೋರುತಲಿ, ಸತ್ಯ ಪ್ರೇಮದ, ಸೇವೆ ಸಂಘದಿ, ಶಾಂತಿ ಹರುಷವ ಸಾರಿದನು. ಸದಾ ಶಿವನ ಗುಣಗಾನವಿದು. ಸದಾ ಸೇವೆ ಶಿವ ಪ್ರೀಯವದು, ದೇಶ ಸೇವೆಯ ಗೈಯಲಿಕೆ, ತಾ ಮೆಚ್ಚಿ ಎಮಗೆ ಶುಭ ಕೋರುವನು. ದೇಶ ಸೇವೆಯೆ ನಿತ್ಯ ಮಂತ್ರವು, ಮುಂದೆ ಹರಿಯಲಿಕೆ ಸಾಧನವು."[10] ಹೀಗೆ ದೇಶದ ಸೇವೆ ಮಾಡಲು ಗಾಂಧಿಜೀಯವರ ನೇತೃತ್ವದ ಮಾರ್ಗದರ್ಶನ ದೇಶಾಭಿಮಾನ ಮೂಡಿಸಲು ತುಂಬಾ ಪ್ರಬಲ ಪ್ರೇರಣೆಯಾಯಿತು.

***ಸೇವೆಯೇ ನಮ್ಮುಸಿರು – ಸುಭಾಷ ಹೇ. ಚವ್ಹಾಣ***

ಭಾರತ ಮಾತೆಯ ಮಕ್ಕಳು ನಾವು ಕನ್ನಡಿಗರು, ದೇಶದ ಸೇವೆಗೆ ಸದಾಸಿದ್ದರು. ಪರಿಸರ, ನಾಡು, ನುಡಿ, ಸಂಸ್ಕೃತಿಯ ರಕ್ಷಕರು. ಕಾಯಕ ನಿಷ್ಠರು, ಜನಮನದ ಪ್ರೀತಿಯನ್ನು ಹಂಚುವವರು. ಎದೆಯ ಹಂಬಲದಂತೆ ಬಾಳ ಸವಿಯನ್ನು ಪಡೆಯಲು ಎಲ್ಲರೂ ಬರಲಿ ಎಂಬ ಮಾನವೀಯ ಮೌಲ್ಯಗಳ ಪರಿಪಾಲಕರು. ನಾವು ಭಾರತೀಯರು ಅರಿವಿನಿಂದ ಕೂಡಿ ಬಾಳುವವರು ಆಗಿದ್ದೇವೆ ಎಂಬ ಆಶಯವು ಕಂಡು ಬರುತ್ತದೆ. ಸಾರ್ವಜನಿಕರಿಗೆ ತೊಂದರ ಆಗಿ ದೌರ್ಜನ್ಯ ದುರಾಲೋಚನೆ ಲಂಚದಾಹವನ್ನು

[8] ಅರುಣಕುಮಾರ ರಾಜಮಾನೆ. *ಓ ನನ್ನ ಚೇತನ.* ಪು.ಸಂ. 01

[9] ಅದೇ. ಪು.ಸಂ.04.

[10] ಅಮೃತಗೌಡ ಶಾಡಲಗೇರಿ. *ಪರಿಭ್ರಮಣೆ.* ಪು.ಸಂ. 38

ಅಳಿಸುತ್ತ, ಕಾಯಕದ ಅನುಷ್ಠಾನದ ತತ್ವದಿಂದ ನಾಡಭಕ್ತಿ ತುಂಬಾ ಶಕ್ತಿ ನೀಡುವಂತೆ ಆತ್ಮವಿಶ್ವಾಸವನ್ನು ಅಭಿವೃದ್ಧಿಯನ್ನು ಹೊಂದಲು ಪ್ರಯತ್ನಿಸುವರು. "ಸ್ವಯಂ ಸೇವಕರು ನಾವು ಸದಾ ಶ್ರಮಿಕರು. ಕನ್ನಡಿಗರು ನಾವು ಭಾರತಾಂಬೆಯ ಸುಪುತ್ರರು. ಸ್ವಯಂ ಒಲವಿನ ಸೇವಕರು. ನಾಡನುಳಿಸುವ ರಸಿಕರು, ಉಳಿಸುವೆವು ಸಕಲ ಸಮೃದ್ಧಿ ಮೌಲ್ಯ ವೃದ್ಧಿಯ ನಾಡು ಜನಮನದಲ್ಲಿ ಮೂಡಿಬರಲಿ ಈ ಹೊಸ ನಾಡು, ಅಜ್ಞಾನ ಮೌಢ್ಯತೆ ಗಾಡಾಂಧಕಾರವಳಿಸುವ ಪರಿಸರ ರಕ್ಷಣೆಯ ಹೊಣೆಗಾರಿಕೆ ಕಲಿಸುತ ಹಸಿರನು ಬೆಳೆಸುವ ನೀತಿ ತಿಳಿಸುತ, ಹಸನು ಮಾಡುವೆವು ಸಿರಿಸಂಪತ್ತಿನ ಈ ನಾಡು ಜನಮನದಲಿ ಮೂಡಿಬರಲಿ ಈ ಹೊಸನಾಡು".[11] ಹೀಗೆ ಭಾರತ ದೇಶದ ಅಭಿಮಾನದ, ಸೇವೆಯ ಜವಾಬ್ದಾರಿ ಅರಿತು ಬದುಕುವ ವಿಚಾರಗಳನ್ನು ಗಮನಿಸಬಹುದಾಗಿದೆ.

"ಕವಿ ತನ್ನ ಸುತ್ತಣ ಜೀವನದಲ್ಲಿ ತನ್ನ ಮೇಲೆ ತಮ್ಮ ವ್ಯಕ್ತಿತ್ವದಿಂದ ಪ್ರಭಾವ ಬೀರಿದ ಹಲವು ಗಣ್ಯ ವ್ಯಕ್ತಿಗಳನ್ನೋ ಮಹಾವ್ಯಕ್ತಿಗಳನ್ನೋ ಕುರಿತು ಬರೆದ ಗೀತೆಗಳಲ್ಲಿ ನಾವು ವ್ಯಕ್ತಿಯ ಚಾರಿತ್ರ್ಯದ ಸೌಂದರ್ಯವನ್ನು ಕಾಣುತ್ತೇವೆ. ಹಾಗೇ ಪರಿಣಾಮ ಮಾಡುವ ವ್ಯಕ್ತಿ ಗಂಡಾಗಿರಬಹುದು, ಹೆಣ್ಣಾಗಿರಬಹುದು, ಗೆಳೆಯನಾಗಿರಬಹುದು, ಗುರುವಾಗಿರಬಹುದು, ಮಹಾತ್ಮನಾಗಿರಬಹುದು, ದೇಶದ ನಾಯಕನಾಗಿರಬಹುದು. ಆ ವ್ಯಕ್ತಿ ಸಮಕಾಲೀನನಾಗಿರಬಹುದು.
ಪುರಾತನನಾಗಿರಬಹುದು. ಅಂತಹ ವ್ಯಕ್ತಿ ಚಿತ್ರಣ ಗುಣ ಪ್ರಶಂಸಾರೂಪವಾದ ಕವನವಾಗಿಯೂ ಚರಮಗೀತೆ ರೂಪವಾಗಿಯೋ ಉಪಾಸನಾ ರೂಪವಾದ ಕವನವಾಗಿಯೂ ಇರಬಹುದು".[12] ಹೀಗೆ ಕವಿಗಳು ಗಾಂಧೀಜಿಯವರ ವ್ಯಕ್ತಿತ್ವವನ್ನು ಕೊಡುಗೆಗಳನ್ನು ಕವನಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.

***ಈ ದೇಶವೇ ಹೀಗೆ – ಶಂಕರಗೌಡ ಸಾತ್ಮಾರ***

ಭಾರತ ದೇಶವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ. ಭಾರತದ ಉಜ್ವಲ ಭವಿಷ್ಯ ಕಟ್ಟುವುದು, ಸೇವೆ, ಹಿತರಕ್ಷಣೆಯ ಕಾರ್ಯ ಮಾಡುವುದು ಆಗಿದೆ. ಆಗಬೇಕಾಗಿರುವ ಅಭಿವೃದ್ಧಿಯು ನಿಧಾನಗತಿಯಲ್ಲಿ ಸಾಗುತ್ತಿದೆ. ಅಡೆತಡೆಗಳು ಹಲವು ಇದೆ. ರೈತರ ಸ್ಥಿತಿ. ಹಸಿವು, ಜನಹಿತ ಕಾರ್ಯದ ಸಫಲತೆಗೆ ಇನ್ನೂ ಶ್ರಮವಹಿಸಬೇಕು. ಅನ್ಯಾಯವನ್ನು ತಡೆಯಬೇಕು. ಆದರೆ ವ್ಯತಿರಿಕ್ತ ಎಂಬಂತೆ ವಿಚಾರಗಳು ತಲೆ ಎತ್ತುತ್ತಿವೆ. ಅಂತಹ ವಿಚಾರಗಳನ್ನು ನಕಾರಾತ್ಮಕ ಪ್ರಭಾವ ಬೀರುತ್ತಿವೆ. ಅವುಗಳನ್ನು ಸಕಾರಾತ್ಮಕದ ಮಾರ್ಗದಲ್ಲಿ ಪರಿವರ್ತನೆಯನ್ನು ಮಾಡುವ ಆಶಯ ಅಭಿವ್ಯಕ್ತಪಡಿಸಿದ್ದಾರೆ. "ಈ ದೇಶವೇ ಹೀಗೆ ಇಲ್ಲಿ ದೇಶ ಕಟ್ಟುವುದೆಂದರೆ ಮಂದಿರ–ಮಸೀದಿ ಕಟ್ಟುವುದಾಗಿದೆ. ಈ ದೇಶವೇ ಹೀಗೆ, ಈಗ ಇಲ್ಲಿ ದೇಶ ಸೇವೆ ಮಾಡುವುದೆಂದರೆ ಸ್ವಂತದ ಸ್ವಜನ ಹಿತರಕ್ಷಣೆಯಾಗಿದೆ. ಈ ದೇಶವೇ ಹೀಗೆ ಈಗ ಇಲ್ಲಿ ದೇಶದ ಜನರ ಹಸಿವು ನೀಗಿಸುವುದೆಂದರೆ 'ರೇಷನ್ ಚೀಟಿ' ಹಂಚುವುದಾಗಿದೆ"[13] ದೇಶದ ವಿಚಾರಗಳನ್ನು ಕವಿಯು ನಡೆಯುತ್ತಿರುವ ಸತ್ಯದ ದರ್ಶನವನ್ನು ಮಾಡಿದ್ದಾರೆ. ಅವುಗಳು ಪರಿವರ್ತನೆಯಾಗಿ ಸಾರ್ವಜನಿಕರಿಗೆ ಬದುಕಿಗೆ ಉಪಯುಕ್ತರವಾದ ಸೌಲಭ್ಯ ದೊರೆಯಬೇಕು ಎಂಬ ಹಂಬಲ ಅಭಿವ್ಯಕ್ತಗೊಂಡಿದೆ.

***ಸೈನಿಕರಿಗೆ ನಮನ – ಷಕೀಬ್ ಎಸ್.ಕಣದ್ಮನ ನವಿಲೇಹಾಳ್***

ಭಾರತ ದೇಶದ ಗಡಿಭಾಗಗಳಲ್ಲಿ ಸೈನಿಕ ನಿತ್ಯ ನಿರಂತರ ತಮ್ಮ ಸೇವೆಯನ್ನು ಸಲ್ಲಿಸುವರು. ಸೈನಿಕರು ನಮ್ಮನ್ನು ಕಾಯುವರು ಯುದ್ಧ ನಡೆದಾಗ ವೈರಿಗಳಿಗೆ ಎದೆಯನ್ನು ಒಡ್ಡಿ ಗಡಿಭಾಗದಲ್ಲಿ ನಿಲ್ಲುವರು. ಸೈನಿಕ

[11] ಸುಭಾಷ ಹೇ. ಚವ್ಹಾಣ, ಜಗವೆಲ್ಲ ನಗುಂತಿರಲಿ, ಪು.ಸಂ. 47

[12] ಜಿ.ಎಸ್.ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಪು.ಸಂ. 339

[13] ಶಂಕರಗೌಡ ಸಾತ್ಮಾರ, ಗೊಂಬೆಯಾಟ, ಪು.ಸಂ. 15

ಕದನದಲ್ಲಿ ಎದೆ ಸೀಳಿ ಮರಣ ಹೊಂದಿದರೆ ಅದುವೇ ವೀರ ಮರಣ ಎಂದು ಕರೆಯುವರು. ಯೋಧರು ವೀರ ಮರಣವನ್ನು ಹೊಂದಿದರೆ ಗೌರವ ಸಮ್ಮಾನ ಗರ್ವ ಹೆಮ್ಮೆ ಸಂಕೇತವಾಗಿ ಸಮಾಜವು ಶೋಕದ ಆಚರಣೆಯನ್ನು ಆಚರಿಸುವರು. ಈಡೀ ದೇಶವೇ ಅಂತಹ ಸೈನಿಕರಿಗೆ ಮನದ ಪೂರ್ವಕವಾಗಿ ನಮನದ ಕಾಣಿಕೆಯನ್ನು ಸಲ್ಲಿಸುವರು. ಸೈನಿಕನ ಮನೆತನಕ್ಕೆ ಕುಟುಂಬಕ್ಕೆ ಸಮಾಜವು ಸದಾ ಗೌರವವನ್ನು ನೀಡುತ್ತದೆ. "ಸರಕಾರ ಘೋಷಿಸುವುದು ಗೌರವದ ಶ್ಲೋಕವನ್ನು ಎರಡು–ಮೂರು ದಿನದ ಆಚರಣೆಯನ್ನು, ಮಡದಿ ಮಕ್ಕಳು ತೋರುವರು ದುಃಖವನ್ನು, ತಂದೆ–ತಾಯಿ ಹೇಳುವುದು ಗರ್ವದಿಂದ ಅಂದೇ ಅರ್ಪಿಸಿದೆವು ದೇಶಕ್ಕಾಗಿ ನಮ್ಮ ಮಗನನ್ನು. ಸರಕಾರ ನೀಡುವುದು ಪರಮ ವೀರ ಚಕ್ರವನ್ನು, ಘೋಷಿಸಿದ ಹಣದ ಬಹುಮಾನವನ್ನು ವರ್ಷಕ್ಕೆ ಒಂದು ಸಲ ಇಡುವರು ಭಾವಚಿತ್ರವನ್ನು, ಸಲ್ಲಿಸುವರು ಸೈನಿಕರಿಗೆ ನಮನದ ಕಾಣಿಕೆಯನ್ನು"[14] ದೇಶವನ್ನು ಕಾಯುವ ಸೈನಿಕರಿಂದ ದೇಶಬಾಂಧವರು, ಸಾರ್ವಜನಿಕರು ಶಾಂತಿಯ ಜೀವನ ಸಾಗಿಸಲು ಸಹಾಯಕರವಾಗಿದೆ. ಭಾರತೀಯ ಸೇನೆಯ ಸೈನಿಕರಿಗೆ ಹೃದಯ ಪೂರ್ವಕವಾಗಿ ನಮನಗಳು ಎಂಬ ಕವಿಯ ಆಶಯವಾಗಿದೆ. "ದೇಶಾಭಿಮಾನದ ಪ್ರೇರಣೆ ಹೀಗೆ ದೇಶಾಭಿಮಾನ ಹೊಸಗನ್ನಡ ಕಾವ್ಯಕ್ಕೆ, ಮೊದಲನೆಯ ಪ್ರೇರಕ ಶಕ್ತಿಯಾಗಿ ಬಂದಿತು. ದೇಶಾಭಿಮಾನ ಆಗಿನ ಮಟ್ಟಿಗಂತೂ ಹೊಸ ಭಾವನೆಯಾಗಿತ್ತು. ಹೊಸ ಅನುಭವವಾಗಿತ್ತು. ನಾಡಿನ ಅಭಿಮಾನವಲ್ಲದೇ ನುಡಿಯ ಮೇಲಿನ ಅಭಿಮಾನವೂ ಇದರಲ್ಲಿ ಸಮಾವೇಶವಾಗಿತ್ತು. ಕನ್ನಡ ಕಾವ್ಯ ಕ್ಷೀಣದೆಸೆಯಲ್ಲಿ ಬಿದ್ದುಕೊಂಡು, ಹಳೆಯ ಮಾತುಗಳನ್ನೇ ತೊದಲುತ್ತಿರಬಾರದು. ಸುತ್ತಲಿನ ವಾತಾವರಣಕ್ಕೆ ಪ್ರತಿಸ್ಪಂದಿಯಾಗಿ ಸ್ವಚ್ಛಂದವಾಗಿ ಹಾಡಬೇಕೆಂಬ ಮನೀಷೆಯಿಂದ ಕೆಲವರು ಮುಂದೆ ಬಂದರು."[15] ಕಾವ್ಯದ ರಚನೆಯ ಸಂದರ್ಭ ಪರಿಕಲ್ಪನೆಯನ್ನು ಅರಿಯಬಹುದಾಗಿದೆ.

***ಭಾರತೀಯರು – ಷಕೀಬ್ ಎಸ್. ಕಣದ್ಮನೆ ನವಿಲೇ ಹಾಳ್***

ಭಾರತೀಯರು ನಾವು ಭಾರತೀಯರು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವರು. ಸಂಸ್ಕೃತಿಯು ಪ್ರಜ್ವಲವಾಗಿದೆ. ಕಣ್ಣಿಗೆ ಕಾಣುವ ಸತ್ಯ, ಮಿಥ್ಯೆ ಅರಿಯದೇ ಹೋದಾಗ, ಎತ್ತರಕ್ಕೆ ಏರಿದಾಗ ಬೇಸರ ಆಗುವುದು. ಸಂತರು, ಜ್ಞಾನಿಗಳು ಪಂಡಿತರು, ನೀಡಿದ ತತ್ವಗಳು, ಸಿದ್ಧಾಂತಗಳು, ಬೋಧನೆಗಳು ಉತ್ತಮವಾದ ಜೀವನ ದರ್ಶನದ ಮಾರ್ಗವನ್ನು ತೋರಿಸಿರುವವರು. ಸ್ವಾತಂತ್ರ್ಯ ದೊರಕಿದ ನಂತರ ಸಮಾಜದಲ್ಲಿ ಏರುಪೇರುಗಳಾಗಿವೆ. ಅವುಗಳನ್ನು ಸರಿಪಡಿಸಿಕೊಳ್ಳುತ್ತಾ ಪರಿಹಾರ ಪಡೆಯಬೇಕು. ಸಮತಾ ಸಮಾನತೆಯ ಸಾಮಾಜಿಕ ಸ್ಥಾನಮಾನದಿಂದ ಜೀವಿಸಬೇಕು. "ಕಣ್ಣಿಗೆ ಕಾಣುವುದು ಮಿಥ್ಯೆವು, ಕಾಣದೆ ಇರುವುದು ಸತ್ಯವು. ಹುಡುಕುವದು ಸತ್ಯ ಮಿಥ್ಯೆಗಳ ಎತ್ತರವು, ಸಿಗದೆ ಆಗುವುದು ಬೇಸರವು. ಬುದ್ಧ, ಬಸವ, ಅಂಬೇಡ್ಕರ, ಏಸು, ಪೈಗಂಬರ ತತ್ವವು ಸಮಾಜಕ್ಕೆ ಆಗಿದೆ ಮೌಲ್ಯದ ರೂಪವು. ಟಿಪ್ಪು, ಸುಭಾಷ್, ಭಗತ್, ಗಾಂಧಿ, ಸ್ವಾತಂತ್ರವು, ಸಮಾಜಕ್ಕೆ ಆಗಿದೆ ಹೊಡೆದಾಟವು. ಭಾರತದಲ್ಲಿ ಹೆಚ್ಚಿದೆ ಬಡತನ, ಜನರಿಗೆ ಬಂದಿದೆ ಸಂಕಟ, ನೆಡೆಸುವರು ಜೀವನದ ಜೊತೆ ಹೋರಾಟ ಏನೇಯಾಗಲೀ ನಾವು ಕೆಚ್ಚದೆಯ ಭಾರತೀಯರು"[16] ಹೀಗೆ ಭಾರತ ಪರಂಪರೆ ಇತಿಹಾಸ, ಧಾರ್ಮಿಕ, ಸಾಮಾಜಿಕ, ಮುಂತಾದ ವಿಷಯಗಳನ್ನು ಕವಿಯು ತಿಳಿಸುತ್ತಾರೆ.

---

14 ಷಕೀಬ್ ಎಸ್. ಕಣದ್ಮನೆ ನವಿಲೇಹಾಳ್, ಮೋಹದ ಮೋಡಗಳು,ಪು.ಸಂ. 02

15 ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪು.ಸಂ. 39

16 ಷಕೀಬ್ ಎಸ್. ಕಣದ್ಮನೆ, ಮೋಹದ ಮೋಡಗಳು, ಪು.ಸಂ. 03

***ಹಿಂದೂಸ್ಥಾನಿನ ಕಂದ: ಷಕೀಬ್ ಎಸ್. ಕಣದ್ಮನೆ ನವಿಲೇ ಹಾಳ್***

ಭಾರತ ದೇಶದ ಸ್ವಾತಂತ್ರ್ಯ ಹೋರಾಟದಿಂದ ಶಾಂತಿಯ ಪರಿಪಾಲನೆಯಿಂದ ತನ್ನ ಭವಿಷ್ಯವನ್ನು ರೂಪಿಸಿಗೊಂಡ ಬಗೆ ಭವ್ಯವಾಗಿದೆ. ವಿವಿಧತೆಯಲ್ಲಿ ಏಕತೆಯ ಮಂತ್ರ ಪಟಿಸುತ್ತಾ. ಬದುಕನ್ನು ರೂಪಿಸಿಕೊಳ್ಳಲು ಹೋರಾಟಗಾರರು ಇಂದು ಇದ್ದಾರೆ. ಉತ್ತಮ ಜೀವನ ಪರಿಶ್ರಮದಿಂದ ನಿರ್ಮಿಸಿಕೊಂಡಿರುವರು. ಹಿಂದೂಸ್ಥಾನದಲ್ಲಿ ಮಿತ್ರರು, ಬಂಧು–ಬಾಂಧವರು. ಸತ್ಯದ ಪಾಲನೆಯೊಂದಿಗೆ ಕೂಡಿ ಬಾಳುವರು. "ಭೂಗೋಳದಲ್ಲಿರುವುದು, ಭಾರತ ದೇಶ ಒಂದೇ ಒಂದು, ಹಲವು ಜಾತಿ, ಮತಗಳು ಇರುವುದು ಇಂದು, ಹೋರಾಟಗಾರರಿಗಿಲ್ಲ ಕುಂದು ಪ್ರೀತಿ, ವಿಶ್ವಾಸಕ್ಕೆ ಪ್ರಾಣ ಕೊಡುವವರಿದ್ದಾರಿಂದು, ತಿಳಿಯಿರೆಲ್ಲರೂ ಭಾರತ ಹೃದಯವಂತರ ನಾಡೆಂದು, ಹೆಮ್ಮೆಯಿಂದ ಹೇಳುದೆನಾ, ಹಿಂದೂಸ್ಥಾನಿನ ಕಂದನೆಂದು".[17] ಹೀಗೆ ಕವಿಯು ಭಾರತ ದೇಶದ ಅಭಿಮಾನ ಪ್ರೀತಿ–ವಿಶ್ವಾಸದ ಮಾತುಗಳನ್ನು ಕಾಣಬಹುದಾಗಿದೆ.

ಒಟ್ಟಾರೆಯಾಗಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಭಾರತೀಯ ಕಾವ್ಯ ಮೀಮಾಂಸೆಯದಂತೆ ಕಾವ್ಯದ ರಚನೆ, ಪ್ರಯೋಜನ ಕಾಣಬಹುದಾಗಿದೆ. ಕನ್ನಡ ಕಾವ್ಯದಲ್ಲಿ ನಾಡು, ನುಡಿ, ಸಂಸ್ಕೃತಿಯ ಪರಂಪರೆ, ಇತಿಹಾಸದೊಂದಿಗೆ ದೇಶದ ಅಭಿಮಾನವನ್ನು ತಿಳಿಯಬಹುದಾಗಿದೆ. ಕವಿ–ಕಾವ್ಯ ಸಹೃದಯರೊಂದಿಗೆ ಲೋಕಕಲ್ಯಾಣದ ವಿಷಯಗಳನ್ನು ಗಮನಿಸಬಹುದಾಗಿದೆ. ಹೀಗೆ ಕನ್ನಡಿಗರ ಹೃದಯವಂತಿಕೆ ಆತ್ಮಗೌರವ, ಸಂಸ್ಕೃತಿಯೂ ವಿಶ್ವವೇ ನಮ್ಮ ಕಡೆಗೆ ತಿರುಗಿ ನೋಡುವಂತಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಮೃತಗೌಡ ಶಾಡಲಗೇರಿ. (2013). *ಪರಿಭ್ರಮಣೆ.* ಸನಾತನ ಎಜ್ಯೂಕೇಶನ್ ಆ್ಯಂಡ್ ಚಾರಿಟೇಬಲ್ ಟ್ರಸ್ಟ್.
- ಅಶ್ವಿನಿ, ಡಿ.ಎನ್. (2018). *ಮಾಸದ ಕಿರುನಗೆ.* ಕನ್ನಡ ಪುಸ್ತಕ ಪ್ರಾಧಿಕಾರ.
- ಅರುಣಕುಮಾರ ರಾಜಮಾನೆ. (2018). *ಓ ನನ್ನ ಚೇತನ.* ಚಿನ್ಮನ ಪ್ರಕಾಶನ.
- ಶಿವರುದ್ರಪ್ಪ, ಜಿ.ಎಸ್. (2011). *ಸೌಂದರ್ಯ ಸಮೀಕ್ಷೆ.* ಕಾಮಧೇನು ಪುಸ್ತಕ ಭವನ.
- ಕೀರ್ತಿನಾಥ ಕುರ್ತಕೋಟಿ. (2010). *ಯುಗಧರ್ಮ ಹಾಗೂ ಸಾಹಿತ್ಯ ದರ್ಶನ.* ಕುರ್ತಕೋಟಿ ಮೆಮೊರಿಯಲ್ ಟ್ರಸ್ಟ್.
- ಭಜಂತ್ರಿ, ವೈ.ಎಂ ಮತ್ತು ವೆಂಕಟೇಶ್,ಎಚ್. (ಸಂ.) (2021). *ಕನ್ನಡ ಭಾಷಾ ಪಠ್ಯ–ಮಲಪ್ರಭಾ–1.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ನೀಲಕಂಠೇಗೌಡ, ಹೊ.ನ. (ಸಂ.) (2002). *ಪದಗಳಿಗೆ ಗೆಜ್ಜೆ ಕಟ್ಟಿದಾಗ.* ಬಂಗಾರಪೇಟೆ ಕನ್ನಡ ಸಂಘ.
- ಸುಭಾಷ ಹೇ. ಚವ್ಹಾಣ. (2015). *ಜಗವೆಲ್ಲ ನಗುಂತಿರಲಿ.* ಸೀತಾಮಾತಾ ಪ್ರಕಾಶನ.
- ಶಂಕರಗೌಡ ಸಾತ್ಮಾರ. (2009). *ಗೊಂಬೆಯಾಟ.* ಲಡಾಯಿ ಪ್ರಕಾಶನ.
- ಷಕೀಬ್ ಎಸ್. ಕಣದ್ಮನೆ ನವಿಲೇಹಾಳ್. (2020). *ಮೋಹದ ಮೋಡಗಳು.* ಆತ್ಮೀಯ ಪ್ರಕಾಶನ,
- ಶೇಷಗಿರಿರಾವ್, ಎಲ್.ಎಸ್. (2010). ಹೊಸಗನ್ನಡ ಸಾಹಿತ್ಯ ಚರಿತ್ರೆ. ಅಂಕಿತ ಪುಸ್ತಕ.


[17] ಅದೇ ಪು.ಸಂ. 04